## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 240 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ<br>ಮಾನ್ಯ ವಿಧಾನ ಪರಿಷತ್ತು ಸದಸ್ಯರು |
| ಉತ್ತರಿಸಬೇಕಾದ ದಿನಾಂಕ | : | 04-03-2020 |
| ಉತ್ತರಿಸುವ ಸಚಿವರು | : | ಗೃಹಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರಿನಲ್ಲಿ ಸಿಎಎ ಮತ್ತು ಎನ್‌ಸಿಆರ್ ಪ್ರತಿಭಟನೆಗಾರರ ಮೇಲೆ ಗೋಲಿಬಾರ್‌ನಲ್ಲಿ ಮೃತರಾದವರಿಗೆ ಸರ್ಕಾರ ಪರಿಹಾರ ನೀಡಿದೆಯೇ; 2017-18, 2018-19 ಮತ್ತು 2019-20ರಲ್ಲಿ ರಾಜ್ಯದಲ್ಲಿ ಎಷ್ಟು ಮಂದಿಗೆ ಯಾವ ಯಾವ ಕಾರಣಕ್ಕಾಗಿ ಮೃತರಾದವರಿಗೆ ಪರಿಹಾರ ನೀಡಲಾಗಿದೆ; ಪರಿಹಾರ ನೀಡಿದ ಪಟ್ಟಿ ಸಹಿತ ವಿವರ ನೀಡುವುದು; | 2019-20ನೇ ಸಾಲಿನಲ್ಲಿ ಮಂಗಳೂರು ಗೋಲಿಬಾರ್‌ನಲ್ಲಿ ಇಬ್ಬರು ಮೃತಪಟ್ಟಿದ್ದು, ಸದರಿಯವರಿಗೆ ಪರಿಹಾರ ನೀಡಿರುವುದಿಲ್ಲ. 2017-18 ಮತ್ತು 2018-19ನೇ ಸಾಲಿನಲ್ಲಿ ಗಲಭೆಯಿಂದಾಗಿ ಮೃತಪಟ್ಟ ಯಾವುದೇ ಪ್ರಕರಣಗಳು ಇರುವುದಿಲ್ಲ. |
| ಆ) | ಮಂಗಳೂರಿನಲ್ಲಿ ಪರಿಹಾರ ಘೋಷಿಸಿ ನಂತರ ಅದನ್ನು ನೀಡದಿರಲು ಕಾರಣಗಳೇನು; (ವಿವರ ನೀಡುವುದು). | ಮಂಗಳೂರು ಗೋಲಿಬಾರ್‌ನಲ್ಲಿ ಮೃತಪಟ್ಟ ಅಬ್ದುಲ್ ಜಲೀಲ್ ಮತ್ತು ನೌಶೀನ್ ಇವರುಗಳು ಸದರಿ ಪ್ರಕರಣದಲ್ಲಿ ಅನುಕ್ರಮವಾಗಿ ಎ3 ಮತ್ತು ಎ8 ಆರೋಪಿಗಳಾಗಿರುವುದರಿಂದ ಸರ್ಕಾರದಿಂದ ಯಾವುದೇ ಪರಿಹಾರ ನೀಡಿರುವುದಿಲ್ಲ. |
| ಇ | ರಾಜ್ಯದಲ್ಲಿ ಪ್ರತಿಭಟನೆಗಾರರು ಪ್ರತಿಭಟನೆಗೆ ಮುಂದಾದಾಗ ಅವರ ಮೇಲಿನ ಕೇಸುಗಳನ್ನು ಹಿಂದಕ್ಕೆ ಪಡೆದ ಉದಾಹಾರಣೆಗಳಿವೆಯೇ; ಇದ್ದರೆ ವಿವರ ನೀಡುವುದು; | ರಾಜ್ಯದಲ್ಲಿ ಸಿಎಎ ಮತ್ತು ಎನ್‌ಸಿಆರ್ ಪ್ರತಿಭಟನೆಯ ಸಂಬಂಧ ದಾಖಲಾದ ಯಾವುದೇ ಪ್ರಕರಣಗಳನ್ನು ಸರ್ಕಾರ ಹಿಂಪಡೆದಿರುವುದಿಲ್ಲ. |
| ಈ | 2018-19, 2019-20ರ ಪ್ರತಿಭಟನೆಯಲ್ಲಿ ಗಾಯಗೊಂಡವರ ಚಿಕಿತ್ಸೆಯ ಹಣವನ್ನು ರಾಜ್ಯ ಸರ್ಕಾರದಿಂದ ನೀಡಲಾಗಿದೆಯೇ; ನೀಡಿದ್ದರೆ ವಿವರ ನೀಡುವುದು; ಮಂಗಳೂರು ಗಲಭೆಯಲ್ಲಿ ಗಾಯಗೊಂಡವರ ಸಂಖ್ಯೆ ಎಷ್ಟು; ಅವರು ಪಾವತಿಸಿದ ಆಸ್ಪತ್ರೆಯ ಚಿಕಿತ್ಸೆ ಬಿಲ್ಲು ಎಷ್ಟು; ವಿವರ ನೀಡುವುದು; | 2018-19ನೇ ಸಾಲಿನಲ್ಲಿ ಸಿಎಎ ಮತ್ತು ಎನ್‌ಸಿಆರ್ ಪ್ರತಿಭಟನೆ ನಡೆದಿರುವುದಿಲ್ಲ. 2019-20ನೇ ಸಾಲಿನ ದಿನಾಂಕ:19.12.2019ರಂದು ನಡೆದ ಗಲಭೆಗೆ ಸಂಬಂಧಿಸಿದಂತೆ ಲಭ್ಯ ದಾಖಲಾತಿಗಳ ಪ್ರಕಾರ ಗಲಭೆಯಲ್ಲಿ ಗಾಯಗೊಂಡವರ ವಿವರ ಕೆಳಗಿನಂತಿದೆ.<br><br>ಗಾಯಗೊಂಡ ಸಾರ್ವಜನಿಕರ ಸಂಖ್ಯೆ : 15 |
| ಉ | ಮಂಗಳೂರು ಗಲಭೆಯಲ್ಲಿ ಗಾಯಗೊಂಡ ಪೊಲೀಸರ ಸಂಖ್ಯೆ ಎಷ್ಟು; ವಿವರ ನೀಡುವುದು; ಯಾವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಾರೆ? (ವಿವರ ನೀಡುವುದು) | ಮಂಗಳೂರು ಗಲಭೆಯಲ್ಲಿ ಗಾಯಗೊಂಡ ಪೊಲೀಸರ ಸಂಖ್ಯೆ ಹಾಗೂ ಚಿಕಿತ್ಸೆ ಪಡೆದ ಆಸ್ಪತ್ರೆಯ ವಿವರ ಕೆಳಗಿನಂತಿದೆ.<br>1. ಗಾಯಗೊಂಡ ಪೊಲೀಸರ ಸಂಖ್ಯೆ : 72<br>2. ವೆನ್ಲಾಕ್ ಆಸ್ಪತ್ರೆ : 68<br>3. ಎ.ಜೆ.ಆಸ್ಪತ್ರೆ : 02<br>4. ಪೊಲೀಸ್ ಲೇನ್ ಸರಕಾರಿ ಆಸ್ಪತ್ರೆ : 01<br>5. ಕೆ.ಎಂ.ಸಿ.ಜ್ಯೋತಿ : 01. |

ಹೆಚ್‌ಡಿ 86 ಎಸ್‌ಎಸ್‌ಟಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು